'ಅರೆ ಇದೆಂಥ ಕಲ್ಜಿಗ ಮಾರಾಯ !! ನಾನು ಕೇಳಿದ್ದೇ ತಡ; ಇಂವ ಎತ್ತಿದ ಬಾಯಿಗೆ 'ಯಾವಾಗ ಕೊಟ್ಟು ಕಳಿಸ್ಲಿ ಓಡವನ್ನು' ಅಂತ ಕೇಳ್ತಿದ್ದಾನೆ! ನಾನಿನ್ನೂ ಕೊಡಿಮರದ ಆಯ್ಕೆಯಲ್ಲೇ ತಲೆಕೆಡಿಸಿಕೊಂಡು ಇಲ್ಲಿ ಸಾಯ್ತಿದ್ದೇನೆ; ಇವ್ನಿಗೀಗ ಏನಂತ ಹೇಳಿ ಕಳಿಸ್ಲಿ?' ಎಂದು ಒಂದು ಕ್ಷಣ ಆತಂಕಿತರಾದ ಶೆಟ್ಟರು ಅಲ್ಲೇ ಮತ್ತೊಂದು 'ಹರಿಕತೆ'ಯನ್ನು ಶುರು ಮಾಡಿದ್ದರು.

'ಈಗ ನಂದೊಂದು... ಬಾರೀ ತಲೆಹೋಗುವ ಕೆಲಸ ಆಗೋಗಿದೆ ಮಾರಾಯ; ಆ ಪುರಾಕಿನ ಕಾಲದಿಂದಲೂ ನಮ್ಮ ಈ ಕೆರೆಕೋಡಿಯಲ್ಲಿ, ಹೂ–ನೀರು ಇಲ್ಲದೆ ಅಡ್ಡಬಿದ್ದಿದ್ದ ಧೂಮಾವತಿ ದೈವದ ಕತೆ ನಿಂಗೆ ಗೊತ್ತೆ ಉಂಟಲ್ವ? ಆ ದೈವವನ್ನು ಮತ್ತೆ ಎತ್ತಿಸಿ ನಿಲ್ಲಿಸ್ಲೇಬೇಕೆಂದು ಮೊನ್ನೆ ನಾವು ಇಡಿಸಿದ್ದ ಅಷ್ಟಮಂಗಲದ ಪ್ರಶ್ನೆಯಲ್ಲಿ ತೋರಿ ಬಂದದ್ದೂ ಅದೂ ನಿಂಗೆ ಗೊತ್ತಿದೆ. ಹಾಗಂತ ಅಷ್ಟಮಂಗಲದಲ್ಲಿ ತೋರಿ ಬಂದದ್ದೇ ಸಮ... ಅವತ್ತೇ ನಾನು ಊರಿನ ಪಟೇಲನಾಗಿ ಆ ಕೆಲಸವನ್ನು ಒಪ್ಪಿ, ಅದರ ಕೆಲಸಕ್ಕೆ ಕೈ ಹಾಕಿಯೇ ಬಿಟ್ಟೆ. ಹಾಗೆ ನಾನು ಕೈ ಹಾಕಿದ ನನ್ನ ಬೆನ್ನಿಗೇ, ನನ್ನ ಊರವರು, ಪರವೂರವರು, ಹೊಟ್ಟೆಯ ಕಸುವಿಗೆ ಇಲ್ಲಿಂದ ಕೆಲಸದ ಬೆನ್ನು ಹಿಡಿದು ಪರವೂರಿಗೆ ಹೋದವರು, ಮದುವೆಯಾಗಿ ಗಂಡನಮನೆ ಹೊಕ್ಕ ಹೆಣ್ಮಕ್ಕಳು... ಎಲ್ಲರೂ ನಿಂತೇ ಬಿಟ್ರು. ಸರಿ, ದೂಮಾವತಿಯನ್ನು ಎಬ್ಬಿಸುದೇ ಸಮಾ ಅಂತ ಆವತ್ತು ನಾನು ಸಂಕಲ್ಪ ಮಾಡಿದವ... ಆವತ್ತೇ ಅಷ್ಟಮಂಗಲವನ್ನಿಟ್ಟ ಮಲೆಯಾಳದ ತಂತ್ರಿಗಳಲ್ಲಿ 'ದೈವಸ್ಥಾನದ ಆಯಕಟ್ಟು ಏನು, ಎಂತದ್ದು? ಯಾವ ದಿಕ್ಕಲ್ಲಿ ಸ್ಥಾನ ಕಟ್ಟುದು? ಕೊಡಿಮರಕ್ಕೆ ಯಾವ ಮರವು ಶ್ರೇಷ್ಠ?... ಕೊಡಿಮರದ ಶಿರದಲ್ಲಿ ಏನಿರಬೇಕು?... ಎಂಬುದನ್ನೆಲ್ಲ ಒಂದೂ ಬಿಡದೆ ಕೇಳಿದ್ದೆ ಕೂಡಾ. ಆಗ ಆ ಮಲೆಯಾಳದ ತಂತ್ರಿಗಳು ಅಂದಿದ್ರು 'ದೈವಸ್ಥಾನಕ್ಕೆ ಯಾವತ್ತು ಬಿಳಿಕೇಪಳ ಮರವೇ ಶ್ರೇಷ್ಠವಾದುದು, ಅದು ದೇವಮರ, ಅದು ಎಂದು ಸೀಳುಬಿಡದ ಗಟ್ಟಿ ಮರ; ಒಂದು ವೇಳೆ ಅದು ಸಿಗದಿದ್ರೆ ಸಾಗುವಾನಿ ಮರವೂ ಆಗಬಹುದು' ಎಂದು. ಅವರ ಕಡೆಯವರೇ ಈಗ ತೆಂಕ್ಲಾಗಿಂದ ಬಂದು ವಾಸ್ತುಲೆಕ್ಕದಲ್ಲೆ ಶಾಸ್ತ್ರಬದ್ಧವಾಗಿ ದೈವಸ್ಥಾನದ ಕೆಲಸ ಸುರು ಮಾಡಿದ್ದಾರೆ ಕೂಡಾ; ನಮ್ಮ ಶ್ರೀಧರಾಚಾರಿಯ ಮುಖ್ಯಸ್ಥಿಕೆಯಲ್ಲಿ ದೈವಸ್ಥಾನದ ಮಾಡುಮುಚ್ಚಿಗೆಯ ಕೆಲಸ ನಡೀತಾ ಇದೆ. ಇನ್ನು ಉಳಿದದ್ದು 'ಕೊಡಿಮರ'ದ ಕೆಲ್ಸ ಮಾತ್ರ. ಆದ್ರೆ... ಆ ಕೊಡಿಮರಕ್ಕೆ ನಾನು ಬಿಳಿಕೇಪಳ ಮರವನ್ನು ಒಂದು ಹುಡುಕೀ ಹುಡುಕೀ ಸುಸ್ತಾಗಿ... ಸತ್ತೆ ಮಾರಾಯ; ಎಲ್ಲೂ ಬಿಳಕೇಪಳ ಮರವೇ ಸಿಗ್ತಿಲ್ಲ. ತಲೆಕೆಟ್ಟು ನಾನು ನಮ್ಮ ಇಸರ(ಈಶ್ವರ) ದೇವಸ್ಥಾನದ ಬಟ್ರು ನಾರ್ಣಮಯ್ಯರನ್ನು 'ಬಿಳಿಕೇಪಳ ಮರ ಎಲ್ಲೂ ಸಿಗ್ತಿಲ್ಲ ಸ್ವಾಮಿ, ನಾನು ಏನ್ಮಾಡ್ಲಿ ಅಂತ ಕೇಳಿದ್ರೆ... 'ಮಾಡೋದೇನು?... ನೀನು ಹುಡುಕಬೇಕು ಅಷ್ಟೆ; ದೈವಸ್ಥಾನಕ್ಕೆ ಬಿಳಿಕೇಪಳ ಮರದ ಕೊಡಿಮರವೇ ಬೇಕು... ಹಾಗಂತ ಶಾಸ್ತ್ರದಲ್ಲೇ ಇದೆ' ಅಂತ ಒಂದು ಪೆಟ್ಟು ಎರಡು ತುಂಡು ಅನ್ನುವಂತೆ ಮಾತಾಡಿಬಿಟ್ರು.

'ಅರೆ! ಇದೊಂದು ಭಾರಿ ಪಜೀತಿಯೆ ಆಯ್ತಲ್ಲಾ ಮಾರಾಯ್ರೆ... ನಿಮ್ಗೆ? ಹಿಡಿಲಿಕ್ಕೆ ಹೋದರೆ ಕಚ್ಚಲಿಕ್ಕೆ ಬಂತಂತೆ ಅನ್ನುವ ಕತೆಯಾಯ್ತು ಇದು. ಊರಿಗೇನೋ ಕೇಡು ಬಂತು, ಊರ ಸೆರಗಲ್ಲಿರುವ ನದಿಬಾಯಿಗೆ ನಾಕೈದು ವರ್ಷಗಳಿಂದ ಬೆನ್ನು ಬೆನ್ನಿಗೆ ಆರೇಳು ಓಡಗಳು ಮುಗುಚಿ ಬಿದ್ದು ಹತ್ತು–ಹದಿನೈದು ಮಂದಿ ಸತ್ತಾಗ, ಇದು ಯಾವ ದೈವದ್ದೋ ಕೇಡಿರಬೇಕು ಅಂತಾ ನೀವೇ ಮುಂದೆ ನಿಂತು ಅಷ್ಟಮಂಗಲದಲ್ಲಿ ಪ್ರಶ್ನೆ ಇರಿಸಿದ್ದಾಗ, ನಾನು ಕೂಡಾ ಆ ದೈವಕಾರ್ಯಕ್ಕೆ ಅಲ್ಲಿಗೆ ಬಂದಿರ್ಲಿಲ್ವ?... ಊರಿಗೆ ಒಳ್ಳೆದಾಗ್ಲಿ ಅಂತ ನೀವೇ ಮುಂದೆ ನಿಂತು ಈ ಕೆಲ್ಸ ಮಾಡಿಸುತ್ತಿರುವಾಗ ಆ ದೈವಕಾರ್ಯದ ಕೊಡಿಮರಕ್ಕೆ ಮರವೇ ಸಿಗುದಿಲ್ಲಾಂದ್ರೆ!? ಅಲ್ಲ